# ಮುಂದಿನ ವಾರ 7 ಐಪಿಒಗಳು ಲಭ್ಯ

ಮುಂಬೈ: ಮುಂದಿನ ವಾರ ಏಳು ಐಪಿಒಗಳು ಮಾರುಕಟ್ಟೆಗೆ ಬರಲಿದ್ದು, 3,910 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಗುರಿ ಹೊಂದಿವೆ. ಜತೆಗೆ ನಾಲ್ಕು ಎಸ್‌ಎಂಇಗಳು 135 ಕೋಟಿ ರೂಪಾಯಿ ಕಲೆ ಹಾಕುವ ನಿರೀಕ್ಷೆಯಿದೆ. ಮುತ್ತೂಟ್ ಮೈಕ್ರೋಫಿನ್, ಮೋಟಿಸನ್ಸ್ ಜ್ಯುವೆಲರ್ಸ್, ಸೂರಜ್ ಎಸ್ಟೇಟ್ ಡೆವಲಪರ್ಸ್, ಹ್ಯಾಪಿ ಫೋರ್ಜಿಂಗ್ಸ್, ಆರ್‌ಬಿಝುಡ್ ಜ್ಯುವೆಲರ್ಸ್, ಕ್ರೆಡೋ ಬ್ರಾಂಡ್ಸ್ ಮತ್ತು ಆಜಾದ್ ಇಂಜಿನಿಯರಿಂಗ್ ಚಂದಾದಾರಿಕೆಗೆ ಲಭ್ಯವಾಗಲಿದೆ. ಎಸ್‌ಎಂಇ ವಿಭಾಗದಲ್ಲಿ ಸಹಾರಾ ಮ್ಯಾರಿಟೈಮ್, ಎಲೆಕ್ಟ್ರೋ ಫೋರ್ಸ್, ಶಾಂತಿ ಸ್ಪಿಂಟೆಕ್ಸ್ ಮತ್ತು ಟ್ರೈಡೆಂಟ್ ಟೆಕ್ಲ್ಯಾಬ್ ಮಾರುಕಟ್ಟೆಗೆ ಪ್ರವೇಶ ಮಾಡಲಿವೆ. ಇದುವರೆಗೆ ಮಾರುಕಟ್ಟೆಗೆ ಬಂದಿರುವ ಐಪಿಒಗಳಿಗೆ ಹೂಡಿಕೆದಾರರಿಂದ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೂಡಿಕೆದಾರರು ಬಿಡ್ಡಿಂಗ್‌ನಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಿದ್ದಾರೆ.